[متفق عليه] [صحيح]

ಅನಾಹುತಗಳಿಂದ ರಕ್ಷಿಸಲು ಮತ್ತು ಅವರಿಗೆ ಎಲ್ಲಾ ರೀತಿಯ ಒಳಿತುಗಳನ್ನು ಹೆಚ್ಚು ಹೆಚ್ಚು ದಯಪಾಲಿಸಲು ಪ್ರಾರ್ಥನೆ. "ನಮ್ಮ ಮೇಲೆ ಮತ್ತು ಅಲ್ಲಾಹನ ನೀತಿವಂತ ದಾಸರೆಲ್ಲರ ಮೇಲೆ ಶಾಂತಿಯಿರಲಿ": ನಮಾಝ್ ಮಾಡುವವನಿಗೆ ಮತ್ತು ಭೂಮ್ಯಾಕಾಶಗಳಲ್ಲಿರುವ ಎಲ್ಲಾ ನೀತಿವಂತ ದಾಸರಿಗೆ ಪ್ರಾರ್ಥನೆ. "ಅಲ್ಲಾಹನ ಹೊರತು ಆರಾಧಿಸಲು ಅರ್ಹರಾದ ಅನ್ಯ ದೇವರಿಲ್ಲ ಎಂದು ನಾನು ಸಾಕ್ಷ್ಯವಹಿಸುತ್ತೇನೆ": ಅಂದರೆ, ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಅನ್ಯ ದೇವರಿಲ್ಲವೆಂದು ನಾನು ಖಚಿತವಾಗಿ ಮತ್ತು ದೃಢವಾಗಿ ಒಪ್ಪಿಕೊಳ್ಳುತ್ತೇನೆ. "ಮುಹಮ್ಮದ್ ಅಲ್ಲಾಹನ ದಾಸರು ಮತ್ತು ಸಂದೇಶವಾಹಕರೆಂದು ನಾನು ಸಾಕ್ಷ್ಯ ವಹಿಸುತ್ತೇನೆ": ಅಂದರೆ, ಅವರು ದಾಸರಾಗಿದ್ದಾರೆ ಮತ್ತು ಕಟ್ಟಕಡೆಯ ಸಂದೇಶವಾಹಕರಾಗಿದ್ದಾರೆಂದು ನಾನು ಒಪ್ಪಿಕೊಳ್ಳುತ್ತೇನೆ. ನಂತರ, ನಮಾಝ್ ಮಾಡುವವರು ಅವರಿಗೆ ಇಷ್ಟವಾದ ಪ್ರಾರ್ಥನೆಯನ್ನು ಆರಿಸಿಕೊಳ್ಳಬೇಕೆಂದು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪ್ರೋತ್ಸಾಹಿಸಿದ್ದಾರೆ.

http://www.sunnah.global/hadeeth/kn/show/3096